# ಸ್ವಾಮಿ ರಾಮಕೃಷ್ಣಾನಂದರ ಗುರುಸೇವಾದರ್ಶ

ಸ್ವಾಮಿ ಶಿವಕಾಂತಾನಂದ

**ಶ್ರೀ**ರಾಮಕೃಷ್ಣರ ಲೀಲಾನಾಟಕದಲ್ಲಿ ಪ್ರತಿಯೊಂದು ಪಾತ್ರಕ್ಕೂ ಒಂದೊಂದು ಆದರ್ಶದ ಆಯಾಮವಿತ್ತೆಂದು ಅವರ ಶಿಷ್ಯರ ಹಾಗೂ ಇತರ ಭಕ್ತರ ಜೀವನವನ್ನು ನೋಡಿದರೆ ಸ್ಫುಟವಾಗಿ ತಿಳಿಯುತ್ತದೆ. ಶ್ರೀರಾಮಕೃಷ್ಣರು ಅತ್ಯಂತ ಶಕ್ತಿಯುತ ಅವತಾರವನ್ನು ಕಾಲೋಚಿತವಾಗಿ ತಳೆದಿದ್ದಲ್ಲದೆ, ತಮ್ಮ ಶಿಷ್ಯರ ಮತ್ತು ಭಕ್ತರ ಮೂಲಕ ಮಹೋನ್ನತ ಆದರ್ಶಗಳು ಜಗತ್ತಿನಲ್ಲಿ ಪ್ರಚಾರವಾಗುವಂತೆ ಮಾಡಿದರು. ಇದರಲ್ಲಿ ಸ್ವಾಮಿ ರಾಮಕೃಷ್ಣಾನಂದರಿಗೆ ಬಂದ ಪಾಲು **ಗುರುಸೇವಾದರ್ಶ**. ಇದರಲ್ಲಿ ಅವರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಶೋಭಿಸಿದರು. ಅವರ ಹಿಂದಿನ ಹೆಸರು ಶಶಿಭೂಷಣ ಚಕ್ರವರ್ತಿ. ಶಶಿಭೂಷಣರು ಅನೇಕ ಸದ್ಗುಣಗಳಿಂದ ಭೂಷಿತರಾಗಿದ್ದರೂ, ಮಣಿಗಳ ಮಧ್ಯೆ ಕೌಸ್ತುಭಮಣಿ ಶೋಭಿಸುವಂತೆ ತಮ್ಮ ಗುರುಭಕ್ತಿ ಮತ್ತು ಗುರು ಸೇವೆಗಳಿಂದಲೇ ಪ್ರಕಾಶಿಸಿದರು. ಈ ಸೇವೆಯು ಶ್ರೀರಾಮಕೃಷ್ಣರ ಭೌತಿಕ ಶರೀರಕ್ಕೆ ಮಾತ್ರ ಸೀಮಿತವಾಗಿರದೆ, ಅವರ ನಿರ್ಯಾಣದ ನಂತರವೂ ಮುಂದುವರಿಯಿತು. ಮುಂದೆ ಸ್ವಾಮಿ ವಿವೇಕಾನಂದರ ಆಣತಿಯಂತೆ ಮದ್ರಾಸಿನಲ್ಲಿ ಅದೇ ಶ್ರೀಗುರುವನ್ನು ಎಲ್ಲರಲ್ಲೂ ಕಾಣುತ್ತ, ಜೀವನಲ್ಲಿ ಶಿವನನ್ನು ಕಂಡು ಪ್ರೇಮಮಯ ಸೇವೆಯನ್ನು ಅವರು ಸಲ್ಲಿಸಿದರು. ಅವರ ಅಂತರಾತ್ಮವು ತಮ್ಮ ಗುರುದೇವರ ನಿರಂತರ ಸಾಮೀಪ್ಯವನ್ನು ಸದಾ ಅನುಭವಿಸುತ್ತಿತ್ತು.



ಶಶಿಭೂಷಣ ಚಕ್ರವರ್ತಿ ಮತ್ತು ಶರತ್‌ಚಂದ್ರ ಚಕ್ರವರ್ತಿ (ಮುಂದೆ ಸ್ವಾಮಿ ಶಾರದಾನಂದ) ಇಬ್ಬರೂ ಒಂದೇ ಕುಲೀನ ಬ್ರಾಹ್ಮಣ ಮನೆತನದಿಂದ ಬಂದವರು. ಇವರ ಪೂರ್ವಜರು ನಿಷ್ಠಾವಂತ ಬ್ರಾಹ್ಮಣ ವಂಶಸ್ಥರು. ಸಹಜವಾಗಿಯೇ ಸದಾಚಾರಗಳನ್ನು ಅನೇಕ ಪೀಳಿಗೆಗಳಿಂದ ಪಾಲಿಸಿಕೊಂಡು ಬಂದಿದ್ದರು. ಸಮಾಜದಲ್ಲಿ ಪೂಜಾರ್ಹ ಸಿದ್ಧರು ಹಾಗೂ ಗಂಭೀರ ಸ್ವಭಾವದವರಾಗಿದ್ದರು. ಶಶಿಯ ತಂದೆ ಈಶ್ವರಚಂದ್ರ ಚಕ್ರವರ್ತಿ ಆಸ್ಥಾನ ಪಂಡಿತರಾಗಿದ್ದರಲ್ಲದೆ, ಉಚ್ಚಮಟ್ಟದ ತಂತ್ರಸಾಧಕರೂ ಆಗಿದ್ದರು. ಅವರಿಗೆ ದೇವಿಯ ದರ್ಶನವೂ ಆಗಿತ್ತೆಂದು ಪ್ರತೀತಿ. ಹೀಗೆ ಇಂದ್ರಿಯ ಮತ್ತು ಮನಸ್ಸುಗಳ ಸಂಯಮ, ತಪಸ್ಸು, ಪವಿತ್ರತೆ, ಏಕಾಗ್ರತೆ, ಸಹನೆ – ಇವುಗಳು ಶಶಿಗೆ ರಕ್ತಗತವಾಗಿ ಬಂದಿದ್ದವು ಮುಂದೆ ಅವರೇ ತಮ್ಮ "Religion and education" ಮತ್ತು "How to be a real master?" ಎಂಬ ತಮ್ಮ ಉಪನ್ಯಾಸಗಳಲ್ಲಿ ವ್ಯಕ್ತಿಸ್ವಾತಂತ್ರ್ಯ ಮತ್ತು ಕಟ್ಟುಪಾಡುಗಳ ಬಗ್ಗೆ ಸುದೀರ್ಘ ವಿವರಣೆಯನ್ನು ನೀಡುತ್ತಾ, ಹೇಗೆ ವಿಷವಸ್ತುಗಳನ್ನು ಪುಟ್ಟಮಕ್ಕಳ ಕೈಗೆ ಎಟುಕದಂತೆ ಮೇಲಿಡಬೇಕೋ, ಹೇಗೆ ಸಣ್ಣ ಸಸಿಗೆ ಬೇಲಿ ಹಾಕಿ ರಕ್ಷಿಸಬೇಕೋ ಹಾಗೆಯೇ ಪಾರಂಪರಿಕ ಕೌಟುಂಬಿಕ ವಾತಾವರಣದ ಮೂಲಕ ಮಕ್ಕಳನ್ನು ಕೆಡುಕುಗಳಿಂದ ರಕ್ಷಿಸಿ, ಅದ್ಭುತ ಸಹನೆ ಮತ್ತು ಇಚ್ಛಾಶಕ್ತಿಯುಳ್ಳ ಸದ್ವ್ಯಕ್ತಿಗಳನ್ನಾಗಿ ನಿರ್ಮಾಣ ಮಾಡಬೇಕು ಎಂದು ಹೇಳಿದ್ದಾರೆ. ಇದು ಅವರ ಸ್ವಂತ ಅನುಭವವೇ ಆಗಿತ್ತು. ಈ ಗುಣಗಳೇ ಮುಂದೆ ತಮ್ಮ ಗುರುವಿಗೆ ಏಕನಿಷ್ಠೆಯ ಸೇವೆ ಸಲ್ಲಿಸಲು ಭದ್ರ ಬುನಾದಿಯನ್ನು ಹಾಕಿದವು.

## ಕ್ರಿಸ್ತಭಕ್ತಿ-ರಾಮಭಕ್ತಿಗಳ ಅಪೂರ್ವ ಸಂಗಮ

ಇಂಗ್ಲಿಷ್ ವಿದ್ಯಾಭ್ಯಾಸಕ್ಕಾಗಿ ಶಶಿ ಕೊಲ್ಕತಾದ ತನ್ನ ಸೋದರ ಸಂಬಂಧಿಯಾದ ಶರತ್‌ಚಂದ್ರನ ಮನೆಯನ್ನು ಸೇರಿದನು. ಬ್ರಾಹ್ಮಸಮಾಜದ ಸದಸ್ಯರಾದ ಇವರಿಬ್ಬರೂ ಕೇಶವಚಂದ್ರಸೇನನ ಮೂಲಕ ಶ್ರೀರಾಮಕೃಷ್ಣರ ಬಗ್ಗೆ ತಿಳಿದು, ಕೆಲವು ಸ್ನೇಹಿತರೊಡಗೂಡಿ ದಕ್ಷಿಣೇಶ್ವರಕ್ಕೆ ಬಂದರು. ಈ ಯುವಕರು ತಮ್ಮ ಆಪ್ತವಲಯಕ್ಕೆ ಸೇರಿದವರೆಂದು ಗುರುತಿಸಿದ ಶ್ರೀರಾಮಕೃಷ್ಣರು ನೇರವಾಗಿ, ಚಿಕ್ಕವಯಸ್ಸಿನಿಂದಲೇ ಮಾಡಬೇಕಾದ ಸಾಧನೆ, ಸಂಸಾರ ಹಾಗೂ ಭೋಗವಾಸನೆಗಳ ತ್ಯಾಗ – ಇವುಗಳ ಕುರಿತು ಅವರೊಡನೆ ಮಾತನಾಡಿದರು. ಏಸುಕ್ರಿಸ್ತನು ವಿವಾಹದ ಬಗ್ಗೆ ಏನು ಹೇಳಿದ್ದಾನೆಂಬುದನ್ನು, ಕೊಠಡಿಯ ಗೋಡೆಯ ಗೂಡಿನಲ್ಲಿದ್ದ

ಪೂಜ್ಯ ಸ್ವಾಮೀಜಿಯವರು ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಬೈಬಲ್ಲಿನಿಂದ ಓದುವಂತೆ, ಅವರ ಸ್ನೇಹಿತನೊಬ್ಬನಿಗೆ ಹೇಳಿದರು. ಹೀಗೆ ಶ್ರೀರಾಮಕೃಷ್ಣರು ಇವರಿಬ್ಬರ ಹತ್ತಿರ ಕ್ರಿಸ್ತನ ಉಪದೇಶವನ್ನು ಪ್ರಸ್ತಾಪಿಸಿದ ಉದ್ದೇಶವಾದರೂ ಏನು? ಒಮ್ಮೆ ಶ್ರೀರಾಮಕೃಷ್ಣರ ದರ್ಶನದಲ್ಲಿ ಇವರಿಬ್ಬರೂ ಕ್ರಿಸ್ತನ ಶಿಷ್ಯರಂತೆ ಕಂಡುಬಂದಿದ್ದರು. ಅದಕ್ಕೇ ಮೊದಲ ಭೇಟಿಯಲ್ಲಿಯೇ ಶ್ರೀರಾಮಕೃಷ್ಣರು ಕ್ರಿಸ್ತನ ಪ್ರಸ್ತಾಪವನ್ನು ಮಾಡಿದರು.

ಸ್ವಾಮಿ ರಾಮಕೃಷ್ಣಾನಂದರು ಕ್ರೈಸ್ತಶಾಸ್ತ್ರದಲ್ಲಿ ಎಷ್ಟು ನಿಷ್ಣಾತರಾಗಿದ್ದರೆಂದರೆ ಪಾದ್ರಿಗಳನ್ನೂ ವಾದದಲ್ಲಿ ಸೋಲಿಸಿಬಿಡುತ್ತಿದ್ದರು. ಬೈಬಲ್ಲಿನ ಪುಟಪುಟವೂ ಅವರಿಗೆ ಕಂಠಪಾಠವಾಗಿದ್ದವು. ಅವರು ಅದನ್ನು ಎಷ್ಟು ಭಾವುಕರಾಗಿ ವಿವರಿಸುತ್ತಿದ್ದರೆಂಬುದನ್ನು ಸೋದರಿ ದೇವಮಾತಾ (ಲಾರಾ ಗ್ಲೆನ್) ತಮ್ಮ 'Days in an Indian Monastery' ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ಸ್ವಾಮಿ ರಾಮಕೃಷ್ಣಾನಂದರು ಬಾರಾನಗರ ಮಠದಲ್ಲಿ ಬ್ರದರ್ ಲಾರೆನ್ಸ್ ಎಂಬ ಕ್ರೈಸ್ತ ಸಂತನು ನುಡಿದಂತೆ, "ಏನೇ ಬರಲಿ, ಎಂಥ ಕಠಿಣ ದಿನಗಳೇ ನನ್ನ ಜೀವನದ ಪಾಲಿಗಿರಲಿ, ಭಗವಂತನ ಪ್ರೀತಿಗಾಗಿಯೇ ನನ್ನ ಎಲ್ಲ ಕೆಲಸವನ್ನು ಮಾಡುತ್ತೇನೆ" ಎಂಬ ಭಾವದಿಂದ ದುಡಿಯುತ್ತಿದ್ದರು. ಸ್ವಂತ ಆಧ್ಯಾತ್ಮಿಕ ಸಾಧನೆಯನ್ನೂ ಗಣಿಸದೆ ಮಠದ ಎಲ್ಲ ಕೆಲಸವನ್ನೂ ಮಾಡುತ್ತಿದ್ದರು.

**ಆಸುಪ್ತೇರಾಮೃತೇಃ ಕಾಲಂ ನಯೇದ್ವೇದಾಂತಚಿಂತಯಾ।**
**ದದ್ಯಾನ್ನಾವಸರಂ ಕಿಂಚಿತ್ಕಾಮಾದೀನಾಂ ಮನಾಗಪಿ ॥** (*ದಕ್ಷಸ್ಮೃತಿ*)

"ಬೆಳಗ್ಗೆ ಏಳುವುದರಿಂದ ಮಲಗುವವರೆಗೂ, ಕಾಲವನ್ನು ವೇದಾಂತ ಚಿಂತನೆಯಲ್ಲಿಯೇ ಕಳೆಯಬೇಕು. ಕಾಮಾದಿಗಳಿಗೆ ಮನಸ್ಸಿನಲ್ಲಿಯೂ ಕಿಂಚಿತ್ತೂ ಅವಕಾಶವನ್ನು ನೀಡಬಾರದು."

ಮೇಲಿನ ಉಕ್ತಿಯಂತೆ ತಮ್ಮ ಜೀವನವನ್ನು ಸ್ವಾಮಿ ರಾಮಕೃಷ್ಣಾನಂದರು ಕಳೆದರು. ಭಕ್ತಿಪಂಥದ ಆದಿಗುರುವೂ, ರಾಮಾಯಣದ ಮಹಾಮಾಲಾರತ್ನನೂ ಆದ ಹನುಮಂತನು ಸಕಲಶಾಸ್ತ್ರಪಾರಂಗತನಾಗಿದ್ದರೂ ವಿನಯಮೂರ್ತಿಯಾಗಿದ್ದುದನ್ನು ಕಾಣುತ್ತೇವೆ. ಅವನು ಶ್ರೀರಾಮಚಂದ್ರನನ್ನು ಕಂಡೊಡನೆಯೇ ಆಕರ್ಷಿತನಾದ, ಅವನಲ್ಲಿ ಸಂಪೂರ್ಣವಾಗಿ ಶರಣಾದ ಮತ್ತು ರಾಮನ ದಾಸನಾದ. **ದಾಸೋಽಹಂ ಕೌಸಲೇಂದ್ರಸ್ಯ ರಾಮಸ್ಯ ಅಕ್ಲಿಷ್ಟಕರ್ಮಣಃ** (ಸುಂದರಕಾಂಡ: ೪೨.೯) – "ಸುಲಭವಾಗಿ ಎಲ್ಲ ಕಾರ್ಯಗಳನ್ನು ಮಾಡುವ, ಕೌಸಲೇಂದ್ರನಾದ ರಾಮನ ದಾಸನು ನಾನು" ಎಂದು ಅವನೇ ಹೇಳಿಕೊಂಡಿದ್ದಾನೆ, ದಾಸ್ಯಭಕ್ತಿಯ ಮಹಿಮೆಗೆ ಅವನ ಜೀವನವೇ ವ್ಯಾಖ್ಯಾನ. ಹನುಮಂತನು ರಾಮಸೇವೆಗೈಯುತ್ತಾ ಬುದ್ಧಿಬಲ, ಬಾಹುಬಲ ಮತ್ತು ಆಧ್ಯಾತ್ಮಬಲಗಳ ತ್ರಿವೇಣೀಸಂಗಮನಾಗಿದ್ದ ಧೀಮಂತ ಕರ್ಮಯೋಗಿ; ತನ್ನ ಕನಸುಮನಸಿನಲ್ಲಿಯೂ ರಾಮಭಕ್ತಿಯನ್ನುಳಿದು ಬೇರೆಯೇನನ್ನೂ ಬಯಸದ ಅದ್ಭುತ ವ್ಯಕ್ತಿ. ಸ್ವಾಮಿ ರಾಮಕೃಷ್ಣಾನಂದರ ಜೀವನಕ್ಕೂ, ಹನುಮಂತನ ಜೀವನಕ್ಕೂ ಎಂತಹ ಸಾಮ್ಯ! ಹೀಗೆ ಯುಗಾವತಾರ ಶ್ರೀರಾಮಕೃಷ್ಣರ ವಿಶ್ವವ್ಯಾಪಿ ಸರ್ವಧರ್ಮ ಸಮನ್ವಯ ಆಂದೋಲನದಲ್ಲಿ, ಕ್ರಿಸ್ತಭಕ್ತಿ–ರಾಮಭಕ್ತಿಗಳ ಸಮನ್ವಯಮೂರ್ತಿಯಾಗಿ, ಪ್ರಾಚ್ಯ–ಪಾಶ್ಚಾತ್ಯ ಧಾರ್ಮಿಕತೆಗಳ ಸಾರಭೂತಮೂರ್ತಿಯಂತೆ ಕಂಗೊಳಿಸುತ್ತಾರೆ, ಸ್ವಾಮಿ ರಾಮಕೃಷ್ಣಾನಂದರು.

## ಶ್ರೀರಾಮಕೃಷ್ಣಾರ್ಪಣ–ಆನಂದ

ಶ್ರೀರಾಮಕೃಷ್ಣರೊಡನೆ ಆದ ಮೊದಲ ಭೇಟಿಯಲ್ಲಿಯೇ ಶಶಿಗೆ ಅವರ ಬಗ್ಗೆ ಪ್ರಬಲವಾದ ಆಕರ್ಷಣೆಯುಂಟಾಯಿತು. ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದವರಿಗೆಲ್ಲ ಇದೊಂದು ಸಾಮಾನ್ಯ ಅನುಭವ. ಇಂತಹ ಆಕರ್ಷಣೆಗೆ ಕಾರಣವಾದರೂ ಏನು? ಭಕ್ತಾಗ್ರೇಸರ ಗಿರೀಶಚಂದ್ರ ಘೋಷನು ಹೀಗೆ ಹೇಳುತ್ತಾನೆ: "ಶ್ರೀರಾಮಕೃಷ್ಣರ ಪದತಲದಲ್ಲಿ ಬಂದು ಮುಂದೆ ಅಂತರಂಗ ಶಿಷ್ಯರೆಂದು ಯಾರು ಗುರುತಿಸಲ್ಪಟ್ಟರೋ, ಆ ನರೇಂದ್ರಾದಿಗಳು ಹುಟ್ಟಿನಿಂದಲೂ ಸೌಮ್ಯತೆ, ಸಂಯಮ ಮತ್ತು ಅನೇಕ ಸದ್ಗುಣಗಳಿಂದ ಕೂಡಿದ ಶುದ್ಧಾತ್ಮರಾಗಿದ್ದರು. ಅವರೆಲ್ಲ ಹುಡುಗರಾಗಿದ್ದಾಗಲೇ ಶ್ರೀರಾಮಕೃಷ್ಣರ ಬಳಿ ಹೋದವರು. ಸ್ವರ್ಗೀಯ ಪರಿಶುದ್ಧತೆಯಿಂದ ಪವಿತ್ರರಾಗಿದ್ದವರು. ಶ್ರೀರಾಮಕೃಷ್ಣರ ಪ್ರೀತಿಯ ಸೆಳೆತ ಅವರ ಬಂಧುಬಾಂಧವರನ್ನು ಮರೆಸಿತು. ಅವರು ತಮ್ಮ ಹೃದಯ ಆತ್ಮ ಎಲ್ಲವನ್ನೂ ತಮ್ಮ ಗುರುವಿನ ಸೇವೆಗೆ ಸಮರ್ಪಿಸಿಬಿಟ್ಟಿದ್ದರು. ಅವರೆಲ್ಲ ಶುಭ್ರ ಹಿಮದಂತೆ ಇರುವ ಪರಿಶುದ್ಧ ಹುಡುಗರು, ಅವರಲ್ಲಿಯೇ ಶರಣಾದವರು. ಅಂಥವರ ಮೇಲೆ ಶ್ರೀರಾಮಕೃಷ್ಣರ ಪ್ರೀತಿ ಸಹಜವೇ." ಇಂಥ ರಾಮಕೃಷ್ಣ ಪ್ರೇಮಸಾಗರದಲ್ಲಿ ಶಶಿಯು ಹಿಂದೂಮುಂದೂ ನೋಡದೆ ಮುಳುಗಿಹೋದನು. ಶ್ರೀರಾಮಕೃಷ್ಣರ ವಚನಾಮೃತ ಪಾನದ ಮುಂದೆ ಬೇರೆಲ್ಲವೂ ಸಪ್ಪೆಯಾಯಿತು. ಅವರ ಉಪದೇಶಗಳನ್ನು ಕೇಳಿದ್ದರಿಂದ ಅವನ ಅಳಿದುಳಿದ ಸಂಶಯಗಳೂ ನಾಶವಾದವು. ಗುರುವಿನಲ್ಲಿ ಸಂಪೂರ್ಣ ಶರಣಾಗತಿಯನ್ನು ಕೆಲವೇ ದಿನಗಳಲ್ಲಿ ಹೊಂದಿದ ಶಶಿ, ಗುರುದೇವರ ಅಮೃತನುಡಿಗಳನ್ನು ಏನನ್ನೂ ಪ್ರಶ್ನಿಸದೆ ಸಂಪೂರ್ಣ ಒಪ್ಪಿಕೊಂಡು ನಡೆಯಲಾರಂಭಿಸಿದನು.

ಭಕ್ತಿಗ್ರಂಥಗಳಲ್ಲಿ ಮುಕುಟಪ್ರಾಯವಾದ ಭಾಗವತವು ನವವಿಧ ಭಕ್ತಿಯ ಬಗ್ಗೆ ಹೀಗೆ ಹೇಳುತ್ತದೆ:

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ।**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾಂ ॥**

" ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ – ಶ್ರೀಹರಿಗೆ ಭಕ್ತನು ಅರ್ಪಿಸುವ ಇವುಗಳು ನವವಿಧ ಭಕ್ತಿ ಎಂದು ಅನ್ನಿಸಿಕೊಳ್ಳುತ್ತದೆ."

(ಭಾಗವತ: ೭–೫–೨೩–೨೪)

ಇವುಗಳಲ್ಲಿ ಶಶಿಗೆ ದಾಸ್ಯಭಕ್ತಿಯೇ ಪ್ರಿಯವಾಯಿತು. ಅವನು ಗುರುವಿನ ದಾಸನಾದನು, ಭಕ್ತನಾದನು, ನಿಷ್ಠಾವಂತ ಸೇವಕನಾದನು. ಅವನ ಇಡೀ ಜೀವನವು ಗುರುವಿನ ಮೇಲಣ ಭಕ್ತಿಯ ಪರಾಕಾಷ್ಠೆಯಿಂದ ತುಂಬಿಹೋಯಿತು.

ಬರ್ಫ್ (ಹಿಮದ ಚೂರು) ಎಂದರೆ ಶ್ರೀರಾಮಕೃಷ್ಣರಿಗೆ ಇಷ್ಟವೆಂದು ತಿಳಿದಿದ್ದ ಶಶಿ ಒಂದು ದಿನ ಕೊಲ್ಕತಾದಲ್ಲಿ ಒಂದು ದೊಡ್ಡ ಬರ್ಫ್ ತುಂಡನ್ನು ಕೊಂಡುಕೊಂಡು, ಕಾಗದದಲ್ಲಿ ಸುತ್ತಿ, ತಲೆಯ ಮೇಲಿಟ್ಟುಕೊಂಡು ಉರಿಬೇಸಿಗೆಯ ಬಿಸಿಲಿನಲ್ಲಿ ಸುಮಾರು ಆರು ಮೈಲಿ ನಡೆದು ದಕ್ಷಿಣೇಶ್ವರಕ್ಕೆ ಬಂದನು. ಅದನ್ನು ನೋಡಿದ ಶ್ರೀರಾಮಕೃಷ್ಣರು 'ಹಾ' ಎಂದು ಚೀರಿದರು. ಆಶ್ಚರ್ಯವೆಂದರೆ ಶಶಿಯ ಭಕ್ತಿಯ ಶೀತಲತೆಗೋ ಎಂಬಂತೆ ಅಷ್ಟು ಹೊತ್ತು ಬರ್ಫ್ ತಲೆಯ ಮೇಲೆ ಇದ್ದರೂ ಬಿಸಿಲಿನ ಶಾಖಕ್ಕೆ ಒಂದು ಚೂರೂ ಕರಗಿರಲಿಲ್ಲ. ಇನ್ನೊಮ್ಮೆ ಕಾಶೀಪುರದಲ್ಲಿ ಶ್ರೀರಾಮಕೃಷ್ಣರಿಗೆ ಜಾಮ್‌ರೋಲ್ ಎಂಬ ಹಣ್ಣನ್ನು ತಿನ್ನಬೇಕೆಂಬ ಆಸೆಯಾಯಿತು. ಆಗ ಶರತ್ಕಾಲ. ಆ ಹಣ್ಣು ದೊರೆಯುವ ಋತುವಲ್ಲ. ಆದರೆ ಶಶಿ ಶ್ರೀರಾಮಕೃಷ್ಣರ ಮಾತನ್ನು ಸುಳ್ಳಾಗಲು ಬಿಡಬೇಕಲ್ಲ! ಯಾರೋ ಒಬ್ಬರ ಮನೆಯಲ್ಲಿ ಚಳಿಗಾಲದಲ್ಲಿ ಜಾಮ್‌ರೋಲ್ ಹಣ್ಣು ಬಿಡುವುದೆಂದು ಹೇಗೋ ಪತ್ತೆ ಮಾಡಿ ಅವನು ತಂದುಕೊಟ್ಟಾಗ, ಶ್ರೀರಾಮಕೃಷ್ಣರ ಆನಂದಕ್ಕೆ ಮತ್ತು ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಶ್ರೀರಾಮಕೃಷ್ಣರಿಗೆ ಗಂಟಲಿನ ಕ್ಯಾನ್ಸರ್ ಆಗಿ ಶ್ಯಾಮಪುಕುರದ ಬಾಡಿಗೆ ಮನೆಯಲ್ಲಿರುವಾಗ ಉಳಿದ ಶಿಷ್ಯರು ಮತ್ತು ಭಕ್ತರೊಡನೆ ಶ್ರೀರಾಮಕೃಷ್ಣರ ಸೇವೆಯಲ್ಲಿ ಶಶಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ. ಅವನಿಗೆ ಓದಿನ ಆಸಕ್ತಿ ಸಂಪೂರ್ಣವಾಗಿ ಬತ್ತಿಹೋಯಿತು. ಗುರುಸೇವೆಗಾಗಿ ತನ್ನ ಐಹಿಕ ಲಾಭವನ್ನೂ ತುಚ್ಛೀಕರಿಸಿದ. ಬಡತನದ ಬೇಗೆಯಲ್ಲಿದ್ದ ಅವನ ತಂದೆ ಇದನ್ನು ಸಹಿಸಲಾರದೆ ಶ್ಯಾಮಪುಕುರಕ್ಕೆ ಬಂದು ಅವನನ್ನು ನಾನಾ ರೀತಿಯಿಂದ ಓಲೈಸಲು ಯತ್ನಿಸಿ ವಿಫಲರಾದರು. ಕಡೆಗೆ ಶ್ರೀರಾಮಕೃಷ್ಣರನ್ನೇ ಅವರು ಟೀಕಿಸಲಾರಂಭಿಸಿದಾಗ, "ಯಾರು ನನ್ನ ತಂದೆ?" ಎಂದು ಶಶಿಯು ಅವರ ಮೇಲೇ ಕೈಮಾಡಲು ಹೊರಟ. ಇದರಿಂದ ಅವನ ತಂದೆಯು ಮೆಚ್ಚಿ, "ಹೌದು, ನಿನ್ನ ಗುರುಭಕ್ತಿ ನಿಜವಾದುದೇ" ಎಂದು ಹೇಳಿ ಮನೆಗೆ ಹಿಂತಿರುಗಿದರು.

೧೮೮೫ ರ, ಡಿಸೆಂಬರ್ ೧೧ ರಿಂದ ಕಾಶೀಪುರದ ತೋಟದ ಮನೆ ಶ್ರೀರಾಮಕೃಷ್ಣರ ಸೇವಾಕ್ಷೇತ್ರವಾಯಿತು. ನರೇಂದ್ರನ ನೇತೃತ್ವದಲ್ಲಿ ಎಲ್ಲರೂ ವಿಶೇಷ ರೀತಿಯ ಸೇವೆಯನ್ನು ಮಾಡುತ್ತಿದ್ದರು. ಆದರೆ ಶಶಿಯ ಭಕ್ತಿಭಾವಯುತ ಸೇವೆಯ ಪರಿಯೇ ಬೇರೆ. ಅವನು ತನ್ನ ಇಡೀ ಶರೀರ ಮತ್ತು ಮನಸ್ಸುಗಳನ್ನು ಗುರುದೇವರ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದನು. ಸೇವೆಯನ್ನುಳಿದು ಉಳಿದಾವುದೂ ಅವನಿಗೆ ರುಚಿಸಲಿಲ್ಲ. ದಿನೇ ದಿನೇ ಹದಗೆಡುತ್ತಿರುವ ಶ್ರೀರಾಮಕೃಷ್ಣರ ದೇಹಸ್ಥಿತಿಯನ್ನು ಕಂಡು ಮುಂಬರುವ ದುರ್ದಿನವನ್ನು ನೆನೆಯುತ್ತಾ ನರೇಂದ್ರನು ಕೆಲವರಲ್ಲಿ ಹೀಗೆ ಹೇಳಿಕೊಂಡ: "ಶ್ರೀರಾಮಕೃಷ್ಣರು ಪ್ರಾಣಾಂತಕ ಕಾಯಿಲೆಯಿಂದ ನರಳುತ್ತಿದ್ದಾರೆ. ಅವರು ದೇಹತ್ಯಾಗ ಮಾಡಲು ಮನಸ್ಸು ಮಾಡಿಲ್ಲವೆಂದು ಯಾರು ತಾನೆ ಭರವಸೆ ಕೊಡಬಲ್ಲರು? ಇನ್ನೂ ಕಾಲಾವಕಾಶ ಇರುವಾಗಲೇ ನಾವು ಸೇವೆಯ ಮೂಲಕ, ಧ್ಯಾನ ಭಜನೆಗಳ ಮೂಲಕ ಸಾಧ್ಯವಾದಷ್ಟು ಆಧ್ಯಾತ್ಮಿಕ ಮುನ್ನಡೆ ಸಾಧಿಸಿಕೊಳ್ಳಬೇಕು. ಇಲ್ಲವಾದರೆ ಅವರ ನಿರ್ಯಾಣದ ನಂತರ ನಮ್ಮ ಪಶ್ಚಾತ್ತಾಪಕ್ಕೆ ಕೊನೆಮೊದಲಿರುವುದಿಲ್ಲ." ಈ ಮಾತನ್ನು ಆಲಿಸಿದ ಅನೇಕ ಶಿಷ್ಯರು ತಮ್ಮ ಸಾಧನೆಯನ್ನು ತೀವ್ರಗೊಳಿಸಿದರೆ ಶಶಿಯು ಅದಾವುದನ್ನೂ ಲೆಕ್ಕಿಸದೆ ಗುರುದೇವರ ಸೇವೆಯನ್ನು ಮುಂದುವರೆಸಿದನು. ನಿದ್ರೆ, ಆಹಾರ, ಸ್ವಂತಸುಖ, ಸ್ವಾತ್ಮಾನಂದವನ್ನೂ ಮರೆತು ಅನವರತವೂ ಗುರುದೇವರ ಸೇವೆಗೆ ಸಿದ್ಧವಾಗಿದ್ದನು. ಗುರುವಿನ ಯಾತನೆ ಸ್ವಲ್ಪವಾದರೂ ಕಡಿಮೆಯಾದರೆ ಸಾಕು, ಅದೇ ಅವನಿಗೆ ಪರಮಾನಂದವನ್ನು ತರುತ್ತಿತ್ತು. ಅವರ ಬದಲು ತನಗೇ ಆ ನೋವು ಬಂದರೆ ಎಷ್ಟು ಚೆನ್ನ ಎಂದು ಎಷ್ಟೋ ಬಾರಿ ಅವನಿಗೆ ಅನಿಸುತ್ತಿತ್ತು. ತನ್ನ ಶಾರೀರಿಕ ಬಲ, ಅದ್ಭುತ ತಾಳ್ಮೆ, ಅಪಾರ ಶ್ರದ್ಧೆ – ಈ ಎಲ್ಲವನ್ನು ಶಶಿಯು ಗುರುಸೇವೆಗಾಗಿ ಧಾರೆಯೆರೆದನು.

ಈ ಸೇವಾಪರಾಯಣನ ಅದ್ಭುತ ಸೇವೆಗೆ ಶ್ರೀರಾಮಕೃಷ್ಣರೂ ಸ್ಪಂದಿಸುತ್ತಿದ್ದರು. ಒಮ್ಮೆ ಶಶಿ, ರಾತ್ರಿ ವೇಳೆ, ಕೊರೆಯುವ ಚಳಿಯಲ್ಲಿ, ಹೊರಗಿರುವ ಶೌಚಾಲಯವನ್ನು ಸ್ವಚ್ಛಗೊಳಿಸಲು ತೆಳುವಾದ ವಸ್ತ್ರವನ್ನು ಧರಿಸಿ ಹೋದನು. ಇದನ್ನು ನೋಡಿ ಶ್ರೀರಾಮಕೃಷ್ಣರಿಗೆ ತಡೆಯಲಾಗಲಿಲ್ಲ. ದೇಹವನ್ನು ಅಲ್ಲಾಡಿಸುವಷ್ಟು ಶಕ್ತಿ ಇಲ್ಲದಿದ್ದರೂ, ಹೇಗೋ ಹಾಸಿಗೆಯಲ್ಲಿಯೇ ಜರುಗಿಕೊಂಡು ಹೋಗಿ ತೂಗು ಹಾಕಿದ್ದ ದಪ್ಪನೆಯ ಶಲ್ಯವನ್ನು ಎಳೆಯಲು ಪ್ರಯತ್ನಿಸುತ್ತಿದ್ದರು. ಆಗ ಶಶಿ ಕೋಣೆಯೊಳಕ್ಕೆ ಬಂದು ನೋಡಿ, "ಅಯ್ಯೋ, ನೀವು ಏಕೆ ಹೀಗೆ ಮಾಡಿದಿರಿ? ತುಂಬ ಚಳಿ ಇದೆ" ಎಂದನು. ಆಗ ಅವರು, ಪ್ರೇಮತುಂಬಿದ ಪಿಸುದನಿಯಲ್ಲಿ, "ಇಂಥ ಚಳಿಯಲ್ಲಿ ನೀನು ತೆಳುಬಟ್ಟೆಯಲ್ಲಿ ಹೊರಗೆ ಹೋದದ್ದು ನೋಡಿ ನನಗೇ ಚಳಿ ಎನಿಸಿತು. ದಯವಿಟ್ಟು ಹೊದ್ದುಕೋ" ಎಂದಾಗ ಶಶಿಗೆ ಹೃದಯ ತುಂಬಿಬಂದಿತು. ಕಾಶೀಪುರದ ಈ ಎಂಟು ತಿಂಗಳ ವಾಸದಲ್ಲಿ ಅವನು ಪ್ರಾಯಃ ಎಲ್ಲೂ ಹೋಗಲಿಲ್ಲ. ಮುಂದೆ ಬಾರಾನಗರ ಮತ್ತು ಆಲಂಬಜಾರಿನ ಮಠಗಳಿಂದಲೂ ೧೧ ವರ್ಷ ಕಾಲ ಎಲ್ಲೂ ಹೊರಗೆ ಹೋಗಲಿಲ್ಲ.

**ಅಲಂ ವ್ರತೈರಲಂ ತೀರ್ಥೈರಲಂ ಯೋಗೈರಲಂ ಮಖೈಃ ।**
**ಅಲಂ ಜ್ಞಾನಕಥಾಲಾಪೈರ್ಭಕ್ತಿರೇಕೈವ ಮುಕ್ತಿದಾ ॥**

(ಭಾಗವತ ಮಾಹಾತ್ಮ್ಯಮ್ ೨.೨೧)

"ವ್ರತಗಳು, ತೀರ್ಥಸ್ಥಾನಗಳು, ಯೋಗ, ಯಜ್ಞ, ಜ್ಞಾನ, ಮಾತುಕತೆ – ಇವೆಲ್ಲವೂ ಇನ್ನು ಸಾಕು. ಭಕ್ತಿಯೊಂದೇ ಮುಕ್ತಿಯನ್ನು ನೀಡಬಲ್ಲುದು."

ಈ ಭಾವದಿಂದ ಶಶಿ ಎಲ್ಲಿಗೂ ಹೋಗದೆ ಇದ್ದುಬಿಟ್ಟನು. ಒಮ್ಮೆ ರಥಯಾತ್ರೆಯ ಸಂದರ್ಭದಲ್ಲಿ, "ಜಗನ್ನಾಥನ ರಥವನ್ನಾದರೂ ನೋಡಿ ಬಾ" ಎಂದು ಶ್ರೀರಾಮಕೃಷ್ಣರು ಬಲವಂತಪಡಿಸಿದರು. ಅವರೊಬ್ಬರನ್ನೇ ಬಿಟ್ಟು ಹೋಗಬೇಕೆಂದು ಕಾಂಪೌಂಡ್ ಬಳಿಯೇ ನಿಂತು ನೋಡಿ ಬಂದನು. ಒಮ್ಮೊಮ್ಮೆ "ಹೋಗು, ಊಟಮಾಡು. ನಾನು ಆರಾಮವಾಗಿದ್ದೇನೆ" ಎಂದು ಬಲವಂತವಾಗಿ ಶ್ರೀರಾಮಕೃಷ್ಣರು ಅವನನ್ನು ಊಟಕ್ಕೆ

ಕಳಿಸುತ್ತಿದ್ದರು. ಇನ್ನೊಮ್ಮೆ ಶಶಿಯು ಬೀಸಣಿಕೆಯಿಂದ ಗಂಟೆಗಟ್ಟಲೆ ಗಾಳಿ ಬೀಸುವುದನ್ನು ಶ್ರೀರಾಮಕೃಷ್ಣರು ಸಹಿಸದೆ, ತಮಗೇ ಕೈನೋವು ಬಂದಂತೆ ನೋವು ಅನುಭವಿಸುತ್ತ, ಅವನ ಕೈಯಿಂದ ಬೀಸಣಿಕೆಯನ್ನು ಕಿತ್ತುಕೊಂಡು ಲಾಟುವಿನ ಕೈಗೆ ಕೊಟ್ಟರು. ತಮ್ಮ ಕೊನೆಯ ದಿನಗಳಲ್ಲಿ ಶ್ರೀರಾಮಕೃಷ್ಣರು ಶಶಿಗೆ ಹೀಗೆ ಹೇಳಿದರು: **"ನೋಡು, ನೀವು ಹುಡುಗರು ನಿಮ್ಮ ಪ್ರೀತಿಯ ಸೇವೆಯಿಂದ** ನನ್ನನ್ನು ಕಟ್ಟಿ ಹಾಕಿರುವಿರಿ, ನೀವು ಬಿಟ್ಟುಕೊಟ್ಟರೆ ಮಾತ್ರ ನಾನು ಬಿಡುಗಡೆಯಾಗಬಲ್ಲೆನು."

ಅನಂತರ ಸ್ವಾಮಿ ರಾಮಕೃಷ್ಣಾನಂದರಾದ ಶಶಿ, ಶ್ರೀರಾಮಕೃಷ್ಣರ ನಿರ್ಯಾಣದ ನಂತರವೂ ಅವರು ಭೌತಿಕ ಶರೀರವನ್ನು ತ್ಯಜಿಸಿದ್ದಾರೆಂದು ನಂಬಲೇ ಇಲ್ಲ. ಮುಂದೆ ಬಾರಾನಗರ ಮತ್ತು ಆಲಂಬಜಾರ್ ಮಠಗಳಲ್ಲಿ ಅವರ ಭಾವಚಿತ್ರ, ಆತ್ಮಾರಾಮದ ಕಳಶ (ಶ್ರೀರಾಮಕೃಷ್ಣರ ಅಸ್ಥಿ) ಮತ್ತು ಅವರು ಉಪಯೋಗಿಸಿದ ವಸ್ತುಗಳಲ್ಲಿಯೇ ಗುರುದೇವರ ಸಾನ್ನಿಧ್ಯವನ್ನೇ ಭಾವಿಸುತ್ತ ಸತತವಾಗಿ ಪೂಜೆ ಮತ್ತು ಸೇವೆಗಳಲ್ಲಿ ನಿರತರಾದರು.

### ಮಠದ ತಾಯಿ

ಇಲ್ಲಿಂದ ಆರಂಭವಾಯಿತು ಇನ್ನೊಂದು ಹೊಸ ಅಧ್ಯಾಯ. ರಾಮಕೃಷ್ಣ ಸಂಘದ ಆರಂಭದ ದಿನಗಳಲ್ಲಿ, ಸ್ವಾಮಿ ರಾಮಕೃಷ್ಣಾನಂದರ ಪಾತ್ರವೆ ಅತ್ಯಂತ ಹಿರಿದು. ತಮ್ಮ ಸಾಧನೆ, ತಪಸ್ಸು, ತೀರ್ಥಯಾತ್ರೆಗಳನ್ನೆಲ್ಲ ಬದಿಗಿಟ್ಟು ಮಠದ ದಿನಚರಿಗೆ ಭದ್ರ ಬುನಾದಿಯನ್ನು ಅವರು ಹಾಕಿದರು. ಇದನ್ನು ತಮ್ಮ ಅಂತಃಸ್ಫುರಣೆಯಿಂದ ಸಹಜವಾಗಿ ಅವರು ನಿರ್ವಹಿಸಿದರೆಂಬುದು ಈಗ ಇತಿಹಾಸ. ಶ್ರೀಗುರುವಿನ ಜೀವಂತ ಸಾನ್ನಿಧ್ಯದ ಭಾವದಿಂದ ಕೂಡಿದ ಅವರ ಪೂಜೆ ಮತ್ತು ಸೇವಾಕೈಂಕರ್ಯಗಳು ಅವರೇ ಕಂಡುಹಿಡಿದ ವಿಶಿಷ್ಟ ಶೈಲಿಯದಾಗಿತ್ತು. ಇದನ್ನು ಕಂಡ ಅವರ ಸಹೋದರಸಂನ್ಯಾಸಿಗಳು ಹಾಗೂ ಕೆಲವು ವಿವೇಕಾನಂದರ ಶಿಷ್ಯರು ಅದನ್ನು ತಮ್ಮ ಜೀವನದಾದ್ಯಂತ ಆನಂದದಿಂದ ಸ್ಮರಿಸುತ್ತಿದ್ದರು.

ಸ್ವಾಮಿ ರಾಮಕೃಷ್ಣಾನಂದರ ದಿನಚರಿ ನಸುಕಿನಲ್ಲಿಯೇ ಆರಂಭವಾಗುತ್ತಿತ್ತು. ಬೆಳಗ್ಗೆ, ಮಲಗಿರುವ ಜೀವಂತ ವ್ಯಕ್ತಿಯನ್ನು ಎಬ್ಬಿಸುವಂತೆ ಶ್ರೀರಾಮಕೃಷ್ಣರನ್ನು ನಿದ್ದೆಯಿಂದ ಎಬ್ಬಿಸುವರು; ಹಲ್ಲುಜ್ಜುವುದಕ್ಕೆ ಹದವಾಗಿ ಜಜ್ಜಿದ ಬೇವಿನ ಕಡ್ಡಿ ನೀಡಿದ ನಂತರ ಬಾಯಿಮುಕ್ಕಳಿಸುವುದಕ್ಕೆ ನೀರು ಕೊಟ್ಟು, ಕೊಬ್ಬರಿ ಉಂಡೆ, ಕಲ್ಲುಸಕ್ಕರೆಗಳನ್ನು ನಿವೇದಿಸುವರು. ನಂತರ ಗುಡುಗುಡಿಯನ್ನು ಸೇದಲು ಕೊಡುವರು. ಪೂಜಾಗೃಹವನ್ನು ಸ್ವಚ್ಛಗೊಳಿಸಿ, ಪೂಜಾಪಾತ್ರೆಗಳನ್ನು ತೊಳೆದು, ಹೂವುಗಳನ್ನು ಕೊಯ್ದುಕೊಂಡು ಬಂದು ಪೂಜೆಗೆ ಅಣಿ ಮಾಡಿಕೊಂಡು, ಬಜಾರಿಗೆ ಹೋಗಿ ಉತ್ತಮ ವಸ್ತುಗಳನ್ನೇ ಆಯ್ದು ತಂದು, ಶ್ರೀರಾಮಕೃಷ್ಣರ ಪೂಜೆಗೆ ಕುಳಿತುಕೊಳ್ಳುವರು. ಅವರ ಪವಿತ್ರ ಪಾದುಕೆಗಳಿಗೆ ಹೂವುಗಳನ್ನಿಟ್ಟು ನಮಿಸುವರು. ಪೂಜೆ ಮಾಡುವಾಗ ಅವರಲ್ಲಿ ವಿಶೇಷ ಭಾವ ಮತ್ತು ತನ್ಮಯತೆ ಇರುತ್ತಿತ್ತು. ಅವರು ಪೂಜೆ ಮಾಡುವುದನ್ನು ನೋಡುವುದೇ ಒಂದು ದೇವದುರ್ಲಭ ದೃಶ್ಯ. ನಂತರ ಗಂಗಾಜಲವನ್ನು ತಂದು ಭೋಗವನ್ನು (ಮಧ್ಯಾಹ್ನದ ನೈವೇದ್ಯ) ಸ್ವತಃ ಸಿದ್ಧಪಡಿಸಿ ಶ್ರೀರಾಮಕೃಷ್ಣರೇ ಬಂದು ಎದುರು ಕುಳಿತು ಸ್ವೀಕರಿಸುತ್ತಿರುವರೇನೋ ಎಂಬಂತೆ ನಿವೇದಿಸುತ್ತಿದ್ದರು. ಮಧ್ಯೆ ಮಧ್ಯೆ ಬೀಸಣಿಕೆ ಬೀಸುವರು. ಶ್ರೀರಾಮಕೃಷ್ಣರಿಗೆ ನೀಡುವ ಪ್ರತಿಯೊಂದು ವಸ್ತುವನ್ನೂ ಸರಿಯಾಗಿ ಪರೀಕ್ಷಿಸಿ ಕೊಡುತ್ತಿದ್ದರು. ಶ್ರೀರಾಮಕೃಷ್ಣರ ಸೇವೆಗಾಗಿ ಉಪಯೋಗಿಸುವ ಎಲ್ಲ ವಸ್ತುಗಳೂ ಅತ್ಯಂತ ಶುಭ್ರವಾಗಿವೆಯೇ, ಶುಚಿಯಾಗಿವೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದರು. ತಾಂಬೂಲದಲ್ಲಿ ಹೆಚ್ಚಿಗೆ ಸುಣ್ಣವನ್ನು ಬೆರೆಸಿದರೆ ಶ್ರೀರಾಮಕೃಷ್ಣರ ನಾಲಿಗೆ ಸುಡುವುದೆನ್ನುವರು.

ಸಂಜೆ ವೇಳೆ ಶ್ರೀರಾಮಕೃಷ್ಣರಿಗೆ ಅವರು ಮಾಡುತ್ತಿದ್ದ ಆರತಿಯನ್ನು ನೋಡಿದವರ ಹೃದಯದಲ್ಲಿ ಭಕ್ತಿ ಮತ್ತು ಪ್ರೇಮದ ಅಲೆಯೇ ಏಳುತ್ತಿತ್ತು. ಅವರ ಮುಖಮಂಡಲ ಒಂದು ಸ್ವರ್ಗೀಯ ತೇಜಃಪುಂಜದಂತೆ ಪ್ರಕಾಶಮಾನವಾಗಿತ್ತು. ಅನೇಕ ಬಾರಿ ಅವರ ಸಹೋದರಸಂನ್ಯಾಸಿಗಳ ಜೊತೆ ಕೂಡಿ ಸಂಜೆಯ ಆರತಿಯ ಸಮಯದಲ್ಲಿ ಭಾವೋನ್ಮತ್ತರಾಗಿ ನರ್ತಿಸುತ್ತಿದ್ದರು, ಜೈಕಾರವನ್ನು ಹಾಕುತ್ತಿದ್ದರು. ರಾತ್ರಿ ಮಲಗುವ ವೇಳೆಯಾದೊಡನೆ, ಶ್ರೀರಾಮಕೃಷ್ಣರ ಹಾಸಿಗೆಯನ್ನು ಸರಿಪಡಿಸಿ, ಸೊಳ್ಳೆ ಪರದೆ ಕಟ್ಟುವರು. ಒಮ್ಮೆ ಬಾರಾನಗರ ಮಠದಲ್ಲಿದ್ದಾಗ ಸೆಖೆಗಾಲದಲ್ಲಿ, ಶ್ರೀರಾಮಕೃಷ್ಣರ ಶಯನಗೃಹಕ್ಕೆ ಹೋಗಿ, ಹಾಸಿಗೆ ಬಳಿ ನಿಂತು ಇಡೀ ರಾತ್ರಿ, ಬೀಸಣಿಕೆಯಿಂದ ಗಾಳಿ ಬೀಸಿದರು. ಈ ಅತಿಮಾನುಷ ಭಕ್ತಿಯ ತೀವ್ರತೆ ನೋಡುವವರ ಮನಸ್ಸಿನಲ್ಲಿ ಶ್ರದ್ಧೆಯ ಚಿರಮುದ್ರೆಯನ್ನು ಒತ್ತುತ್ತಿತ್ತು.

ಇಷ್ಟಲ್ಲದೆ ಸ್ವಾಮಿ ರಾಮಕೃಷ್ಣಾನಂದರು ಇಡೀ ಆಶ್ರಮದ ಇತರ ಕೆಲಸಕಾರ್ಯಗಳನ್ನೂ ಜೊತೆಜೊತೆಗೇ ಮಾಡುತ್ತಿದ್ದರು. ಪ್ರಪಂಚವನ್ನೇ ಮರೆತು ತಪೋನಿರತರಾಗಿರುತ್ತಿದ್ದ ಸಹೋದರ ಸಂನ್ಯಾಸಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಅವರೆಲ್ಲ ಧ್ಯಾನ ಜಪಗಳಿಂದ ಮೇಲೇಳುವುದನ್ನೇ ನಿರೀಕ್ಷಿಸುತ್ತ, ಆಹಾರವನ್ನು ಹಿಡಿದು ಕಾಯುತ್ತಿರುತ್ತಿದ್ದರು. ಹೆಚ್ಚು ತಡವಾದಲ್ಲಿ ಬಲವಂತವಾಗಿ ಎಬ್ಬಿಸಿ ಅವರ ಬಾಯೊಳಗೆ ಆಹಾರವನ್ನು ತುರುಕುತ್ತಿದ್ದರು. ಹೀಗೆ ಮಠದಲ್ಲಿ ಸ್ಥಿರವಾಗಿ ನಿಂತು ತಾಯಿಯಂತೆ ಎಲ್ಲವನ್ನೂ ನೋಡಿಕೊಂಡು ನಡೆಸಿಕೊಂಡು ಹೋಗುತ್ತಿದ್ದ ಸ್ವಾಮಿ ರಾಮಕೃಷ್ಣಾನಂದರನ್ನು ಅವರ ಎಲ್ಲ ಸಹೋದರಸಂನ್ಯಾಸಿಗಳೂ ಒಕ್ಕೊರಲಿನಿಂದ ಅಭಿನಂದಿಸುತ್ತಿದ್ದರು. ಶ್ರೀರಾಮಕೃಷ್ಣರು ಇನ್ನೂ ದೇಹಧರಿಸಿಕೊಂಡೇ ಎಲ್ಲರೊಡನೆಯೂ ಆನಂದದಿಂದ ಇರುವರೇನೋ ಎಂಬ ಭಾವಸ್ಫುರಣೆಯನ್ನು ರಾಮಕೃಷ್ಣಾನಂದರು ಬಾರಾನಗರ ಮಠದಲ್ಲಿ ಜಾಗೃತಗೊಳಿಸಿದ್ದರು. ೧೮೯೪ ರಲ್ಲಿ ಶಿಷ್ಯರೂ ಭಕ್ತರೂ ಸೇರಿ ಶ್ರೀರಾಮಕೃಷ್ಣರ ಜನ್ಮೋತ್ಸವವನ್ನು ದಕ್ಷಿಣೇಶ್ವರದಲ್ಲಿ ವಿಜೃಂಭಣೆಯಿಂದ ಆಚರಿಸಿದಾಗ ಶ್ರೀರಾಮಕೃಷ್ಣರ ನಾಮೋಚ್ಚಾರಣೆ ಮಾಡುತ್ತ ಭಾವಾವೇಶದಿಂದ ನರ್ತಿಸಿದರು. ನೆರೆದ ಭಕ್ತರೆಲ್ಲರೂ ಅವರ ಭಕ್ತಿಯ ಪರವಶತೆಯಿಂದ ತುಂಬ ಪ್ರಭಾವಿತರಾದರು.

## ದಕ್ಷಿಣದ ಬೆಂಬೆಳಕು

ಹೀಗೆ ಶ್ರೀರಾಮಕೃಷ್ಣರ ಸೇವೆಯಲ್ಲಿಯೇ ತಮ್ಮನ್ನು ಗಾಢವಾಗಿ ೧೧ ವರ್ಷಗಳ ದೀರ್ಘ ಕಾಲ ತಲ್ಲೀನರಾಗಿಸಿಕೊಂಡಿದ್ದರೂ, ಸ್ವಾಮಿ ವಿವೇಕಾನಂದರ ಮಾತಿಗೆ ಬೆಲೆಕೊಟ್ಟು, ಮದರಾಸಿಗೆ ಹೊರಟರು. ತಮ್ಮ ನಾಯಕನ ಆಜ್ಞೆಯನ್ನು ಗುರ್ವಾಜ್ಞೆಯೆಂದೇ ಪಾಲಿಸಿದರು. ಸ್ವಾಮಿ ರಾಮಕೃಷ್ಣಾನಂದರ ಅಭೂತಪೂರ್ವ ಗುರು ಭಕ್ತಿಯ ಮಹಿಮೆ ಒಂದು ಕಡೆಯಾದರೆ, ಅವರ ಸಹೋದರ ಸಂನ್ಯಾಸಿ ಮತ್ತು ನಾಯಕನಾದ ಸ್ವಾಮಿ ವಿವೇಕಾನಂದರ ಮೇಲಿದ್ದ ಪ್ರೀತಿ, ವಿಶ್ವಾಸ ಮತ್ತು ನಿಷ್ಠೆಗಳು ಮತ್ತೊಂದು ಕಡೆ. ತಮ್ಮ ನೆಚ್ಚಿನ ನರೇಂದ್ರನ ಒಂದೇ ಒಂದು ಮಾತು ಅವರಿಗೆ ಸೇನಾನಾಯಕನ ಆಜ್ಞೆಯಂತೆ ತೋರಿತು.

ವಿವೇಕಾನಂದರ ಪ್ರವಚನಗಳ ಪ್ರಚಂಡ ಪ್ರಭಾವಕ್ಕೆ ಒಳಗಾಗಿದ್ದ ದಕ್ಷಿಣ ಭಾರತದಲ್ಲಿ ರಾಮಕೃಷ್ಣ ಮಹಾಸಂಘದ ಭದ್ರ ಬುನಾದಿಯನ್ನು ಹಾಕುವ ಮಹಾಕಾರ್ಯ ಈಗ ಶ್ರೀರಾಮ ಕೃಷ್ಣಾನಂದರಿಗೆ ಪ್ರಾಪ್ತವಾಯಿತು. ಕಟ್ಟಾ ಸಾಂಪ್ರದಾಯಿಕ ಆಚಾರ ವಿಚಾರಗಳ ಸಂಸ್ಕೃತಿಯನ್ನು ಹೊಂದಿದ್ದ ದಕ್ಷಿಣ ಭಾರತದಲ್ಲಿ ಅಷ್ಟೇ ಸಾಂಪ್ರದಾಯಿಕ ಸಂಸ್ಕೃತಿಯುಳ್ಳ, ತೀಕ್ಷ್ಣಮತಿಯಾಗಿದ್ದು ಸಂಸ್ಕೃತ ಪಾಂಡಿತ್ಯ ಹೊಂದಿರುವ ಶಶಿಯೇ ಸೂಕ್ತ ವ್ಯಕ್ತಿ ಎಂದು ಕಂಡುಕೊಂಡ ವಿವೇಕಾನಂದರು, ಮದ್ರಾಸಿನ ಮಹಾಜನತೆಗೆ 'ನಿಮಗಿಂತ ಆಚಾರಶೀಲನಾದ ಪರಮಹಂಸರ ಶಿಷ್ಯನೊಬ್ಬನನ್ನು ಕಳಿಸುವೆನು' ಎಂಬ ಆಶ್ವಾಸನೆ ಇತ್ತಿದ್ದರು. ಇಲ್ಲಿಂದ ಆರಂಭ ವಾಯಿತು, ಸ್ವಾಮಿ ರಾಮಕೃಷ್ಣಾನಂದರ ಸೇವಾಗಾಥೆಯ ಹೊಸ ದೊಂದು ಅಧ್ಯಾಯ.

ಸಾಮಾನ್ಯ ವ್ಯಕ್ತಿಯಂತೆ ಮದ್ರಾಸಿಗೆ ಬಂದು ಸೇರಿದ ರಾಮ ಕೃಷ್ಣಾನಂದರಿಗೆ ಉಳಿದುಕೊಳ್ಳಲು ಸೂಕ್ತ ಸ್ಥಳದ ಏರ್ಪಾಟು ಕೂಡ ಆಗಿರಲಿಲ್ಲ. ಐಸ್ ಹೌಸಿನ (ಇಂದಿನ ವಿವೇಕಾನಂದ ಇಲ್ಲಮ್) ಆವರಣದಲ್ಲಿದ್ದ ಚಿಕ್ಕ ಮನೆಯಲ್ಲಿಯೇ ತಾತ್ಕಾಲಿಕ ವಾಗಿ ಉಳಿದುಕೊಂಡು ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಪೂಜೆ ಮುಂದುವರೆಸಿದರು. ಮುಂದೆ ಆ ಮನೆಯೂ ಹರಾಜಾಗಿ ಭಕ್ತರ ಕೈ ತಪ್ಪಿದಾಗ ಅವರು ಸ್ವಲ್ಪವೂ ವಿಚಲಿತರಾಗಲಿಲ್ಲ. ಮುಂದೆ ಊರಾಚೆ ಇದ್ದ ಮೈಲಾಪುರವೆಂಬ ಹಳ್ಳಿಯ ಒಂದು ಸಣ್ಣ ನಿವೇಶನದಲ್ಲಿ ಒಂದು ಚಿಕ್ಕ ಕಟ್ಟಡ ನಿರ್ಮಿಸಿ, ಅಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಪೂಜಾದಿಗಳನ್ನು ಮುಂದುವರಿಸಿದರು.

ಇಲ್ಲಿಯೂ ಶ್ರೀರಾಮಕೃಷ್ಣರ ಸಾನ್ನಿಧ್ಯ, ಸಾಮೀಪ್ಯ ಮತ್ತು ದಿವ್ಯಾನಂದದ ಸುಧೆಯನ್ನು ಸವಿಯುತ್ತ ಪೂಜಾದಿಗಳನ್ನು ಮಾಡು ತ್ತಿದ್ದರು. ಶ್ರೀರಾಮಕೃಷ್ಣರಿಗೆ ಮಧ್ಯಾಹ್ನ ಸಮರ್ಪಿಸಬೇಕಾದ ಪೂರಿ ಮುಂತಾದ ನೈವೇದ್ಯವನ್ನು ಪೂಜಾಗೃಹದ ಹತ್ತಿರದಲ್ಲಿಯೇ ಒಲೆ ಹೊತ್ತಿಸಿ, ಬಿಸಿಬಿಸಿಯಾಗಿ ತಯಾರಿಸಿ ತಂದು, ತಟ್ಟೆಗೆ ಬಡಿಸಿ ನಿವೇದಿಸುತ್ತಿದ್ದರು. ಶ್ರೀರಾಮಕೃಷ್ಣರೇ ಬಂದು ನೈವೇದ್ಯ ಸ್ವೀಕರಿಸುವಂತೆ ಮತ್ತು ಭೋಜನದ ನಂತರ ಶಯನಗೃಹದ ಹಾಸಿಗೆಯ ಮೇಲೆ ಪವಡಿಸುತ್ತಿರುವಂತೆ ಭಾವಿಸಿ, ತದೇಕ ಚಿತ್ತದಿಂದ ಬೀಸಣಿಕೆ ಬೀಸುತ್ತಿದ್ದರು. ಬೇಸಿಗೆಯ ರಾತ್ರಿಯಲ್ಲಿ ಕೆಲವೊಮ್ಮೆ ದಿಢೀರನೆ ಎದ್ದು ಶಯನಗೃಹದ ಬಾಗಿಲು ತೆರೆದು, ಮಂಚದ ಒಂದು ಕಡೆ ನಿಂತು, ಗಂಟೆಗಟ್ಟಲೆ ಬೀಸಣಿಕೆಯಿಂದ ಬೀಸುತ್ತಿದ್ದರು. ಇಂತಹ ಸಮಯದಲ್ಲಿ ಅವರ ಮುಖ ಕೆಂಪಾಗಿ ಹೋಗಿ, ದಿವ್ಯದರ್ಶನವನ್ನು ಅನುಭವಿಸುತ್ತಿರುವರೇನೋ ಎಂಬಂತೆ ಕಾಣುತ್ತಿತ್ತು.

ಕೆಲವೊಮ್ಮೆ ಸಕಾಲಕ್ಕೆ ಸರಿಯಾಗಿ ಸಹಾಯವು ಬಾರದಿದ್ದಾಗ ಅವರು ಶ್ರೀರಾಮಕೃಷ್ಣರೊಡನೆಯೇ ಪ್ರೇಮಕಲಹವನ್ನು ಮಾಡು ತ್ತಿದ್ದರು. ಆಗ ಹಣಕಾಸಿನ, ಪೂಜಾವಸ್ತುವಿನ ಅಥವಾ ನೈವೇದ್ಯದ ಏರ್ಪಾಟು ಆಶ್ಚರ್ಯಕರವಾದ ರೀತಿಯಿಂದ ಬಂದೊದಗುತ್ತಿತ್ತು. ಆಧುನಿಕ ಶಿಕ್ಷಣ ಪಡೆದ ವಿದ್ಯಾರ್ಥಿಯೊಬ್ಬ ಇದನ್ನೆಲ್ಲ ಕಂಡು, ಮರಣಹೊಂದಿದ ವ್ಯಕ್ತಿಯ ಭಾವಚಿತ್ರಕ್ಕೆ ಈ ರೀತಿ ಸೇವೆ ಸಲ್ಲಿಸು ವುದು ಮತಿಭ್ರಮೆ, ಮೂಢನಂಬಿಕೆಯೆಂದು ವಾದಿಸಿದಾಗ, ರಾಮಕೃಷ್ಣಾನಂದರು ಅವನ ವಾದವನ್ನು ಎಷ್ಟು ತೀಕ್ಷ್ಣವಾಗಿ ಖಂಡಿಸಿದರೆಂದರೆ, "ಅವರು ಹೇಳುತ್ತಿರುವುದು ಸತ್ಯವಲ್ಲದೆ ಬೇರೆಯಲ್ಲ ಎಂಬುದು ನನಗೆ ನಿಶ್ಚಯವಾಯಿತು" ಎಂದು ಅವನೇ ಮುಂದೆ ಸ್ಮರಿಸಿಕೊಳ್ಳುತ್ತಿದ್ದನು.

ಕಷ್ಟದ ಜೀವನಕ್ಕೆ ಒಗ್ಗಿಕೊಂಡಿದ್ದ ಅವರು ಅನೇಕ ಕಷ್ಟ ಕಾರ್ಪಣ್ಯಗಳ ಮಧ್ಯದಲ್ಲಿಯೂ ಎದೆಗುಂದಲಿಲ್ಲ; ತಮ್ಮೊಳಗೂ, ಹೊರಗೂ ಶ್ರೀರಾಮಕೃಷ್ಣರನ್ನು ಉಳಿದು ಬೇರೇನೂ ಕಾಣುತ್ತಿರಲಿಲ್ಲ. ಕೊಯಂಬತ್ತೂರಿನಲ್ಲಿ ಪ್ಲೇಗಿಗೆ ತುತ್ತಾಗಿ ಬಂಧುಬಾಂಧವರನ್ನು ಕಳೆದುಕೊಂಡು ದಿಕ್ಕೆಟ್ಟು ಮದ್ರಾಸಿಗೆ ಬಂದ ಕೆಲವು ಯುವಕರಿಗೆ ಊಟ ವಸತಿಗೆ ಏರ್ಪಾಟು ಮಾಡಿದರು. ಮುಂದೆ ಈ ಕಾರ್ಯವೇ ರಾಮಕೃಷ್ಣ ವಿದ್ಯಾರ್ಥಿ ನಿವಾಸ (Ramakrishna Students' Home) ಎಂಬ ದೊಡ್ಡ ಸಂಸ್ಥೆಯಾಯಿತು; ಸಾವಿರಾರು ಬಡ ಮತ್ತು ಅನಾಥ ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕೊಟ್ಟಿತು. ಇದು ಅವರ ಸೇವಾಕಾರ್ಯಗಳ ಸಣ್ಣ ನಿದರ್ಶನ ಮಾತ್ರ.

**"ವಸತಿ ಹೃದಿ ಸನಾತನೇ ಚ ತಸ್ಮಿನ್ ಭವತಿ ಪುಮಾನ್ ಜಗತೋಽಸ್ಯ ಸೌಮ್ಯರೂಪಃ –** "ಯಾರ ಹೃದಯಕಮಲದಲ್ಲಿ ಭಗವಂತನು ನೆಲೆಸಿರುವನೋ ಅವನು ಸೌಮ್ಯರೂಪನಾಗಿರುವನು" ಎಂಬಂತೆ ಸೌಮ್ಯರೂಪರೂ ಮಿತಭಾಷಿಗಳೂ ಆಗಿದ್ದ ಸ್ವಾಮಿ ರಾಮಕೃಷ್ಣಾನಂದರು ಗುರುಸೇವೆಯಲ್ಲಿ ತಮ್ಮ ಶರೀರವನ್ನೇ ಮರೆತು ತಮ್ಮ ಜೀವನವನ್ನು ಚಂದನದಂತೆ ಸವೆಸಿದರು. ನಿಜ ವಾದ ಗುರುಸೇವೆ ಎಂದರೇನು ಎಂಬುದನ್ನು ತಮ್ಮ ಇಡೀ ಜೀವನದುದ್ದಕ್ಕೂ ತೋರಿಸಿ ಅದರ ಭಾವವಿಶಾಲತೆಯ ಆಳ ಅಗಲಗಳನ್ನು ಸ್ಪರ್ಶಿಸಿ ಪುನೀತರಾದರು.